ಒ ಎಸ್ 22/2020 ಪಿ.ಡಬ್ಲ್ಯೂ:1

ಇಂದು ದಿಃ 04.04.2026 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ ಜೆ ಎಸ್ ವಕೀಲರಿಂದಃ

1ನೇ ವಾದಿಯು ಉದ್ದೂರು ಮಾದಪ್ಪನ ಸೊಸೆ. ವಾದಿಯ ಗಂಡನ ಹೆಸರು ಉದ್ದಂಡಪ್ಪ. 4ನೇ ಪ್ರತಿವಾದಿ ಉದ್ದಂಡಪ್ಪ ಮತ್ತು ವಾದಿಯ ಗಂಡ ಉದ್ದಂಡಪ್ಪ ಬೇರೆ ಬೇರೆ ವ್ಯಕ್ತಿಗಳು. 1ನೇ ವಾದಿಯ ಗಂಡನಾದ ಉದ್ದಂಡಪ್ಪನ ಸಹೋದರನ ಮಗ 4ನೇ ಪ್ರತಿವಾದಿ ಉದ್ದಂಡಪ್ಪ.

ನಾನು ಗೆಜ್ಜಗಳ್ಳಿ ಗ್ರಾಮದಲ್ಲಿ ವಾಸ ಇದ್ದೇನೆ. ನನ್ನ ತಂದೆ ಹೆಸರು ಶಂಕರಪ್ಪ. ನನ್ನ ತಂದೆ ಹಳ್ಳಿಕೆರೆಹುಂಡಿಯಲ್ಲಿ ಜನಿಸಿರುತ್ತಾರೆ. ಹಳ್ಳಿಕೆರೆಹುಂಡಿಯ ಉದ್ದೂರು ಮಾದಪ್ಪನ ಕುಟುಂಬದಲ್ಲಿ ಹುಟ್ಟಿದ್ದರು. 2016ರಲ್ಲಿ ಶಂಕರಪ್ಪ ಮೃತಪಟ್ಟರು. ಅವರು ಕಾಲವಾದ ಸಮಯದಲ್ಲಿ ಗೆಜ್ಜಗಳ್ಳಿ ಗ್ರಾಮದಲ್ಲಿ ಇದ್ದರು. ಅವರು ಎಷ್ಟು ವರ್ಷ ಆ ಗ್ರಾಮದಲ್ಲಿ ಇದ್ದರು ಎಂದು ಗೊತ್ತಿಲ್ಲ. ವಾದಿಗಳಾದ ನಾವು ಮೊದಲಿನಿಂದ ಮತ್ತು ಈಗ ಹಳ್ಳಿಕೆರೆಹುಂಡಿಯಲ್ಲಿ ವಾಸ ಇಲ್ಲ. ನಾನು ಮೆಡಿಸಿನ್ ಕಂಪನಿಯಲ್ಲಿ ಕೆಲಸ ಮಾಡುತ್ತೇನೆ. ನಾನು ಪಿಯುಸಿ ಮತ್ತು ಐ ಟಿ ಐ ವಿದ್ಯಾಭ್ಯಾಸ ಮಾಡಿದ್ದೇನೆ.

1ನೇ ಪ್ರತಿವಾದಿ ಹೆಚ್ ಜಿ ಮಹದೇವಪ್ಪ ನನ್ನ ಚಿಕ್ಕಪ್ಪ ಅಂದರೆ ನನ್ನ ತಾತನಾದ ಉದ್ದೂರು ಮಾದಪ್ಪನ ಮಗ ಗೂಳಪ್ಪನವರ ಮಗ. 1ನೇ ಪ್ರತಿವಾದಿ ಹೆಚ್ ಜಿ ಮಹದೇವಪ್ಪ ಹಳ್ಳಿಕೆರೆಹುಂಡಿಯಲ್ಲಿ ವಾಸ ಇದ್ದಾರೆ. ನನಗೂ 1ನೇ ಪ್ರತಿವಾದಿಗೂ ವಿಶ್ವಾಸ ಚೆನ್ನಾಗಿದೆ. ನಾವು ಪರಸ್ಪರ ಒಬ್ಬರ ಮನೆಗೆ ಒಬ್ಬರು ಹೋಗಿ ಬರುತ್ತೇವೆ. 5ಮತ್ತು 6ನೇ ಐಟಂ ಆಸ್ತಿ ಕುರಿತಂತೆ 1ನೇ ಪ್ರತಿವಾದಿ ಮತ್ತು ಅವರ ತಂದೆ ಸೇರಿಕೊಂಡು 4ನೇ ಪ್ರತಿವಾದಿ ತಂದೆ ವಿರುದ್ದ ಒ ಎಸ್ 13/1994ರ ದಾವೆ ದಾಖಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ದಾವೆಯು ನಿರ್ಬಂಧಕಾಜ್ಞೆ ದಾವೆಯಾಗಿ ವಜಾ ಆದ ನಂತರ ಇದೇ ನ್ಯಾಯಾಲಯದಲ್ಲಿ ಘೋಷಣಾತ್ಮಕ ಡಿಕ್ರಿ ದಾವೆ ಒ ಎಸ್ 60/2020ರ ದಾವೆ ಸಲ್ಲಿಸಿದ ವಿಚಾರ ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿ ಮತ್ತು ನಮ್ಮ ಕುಟುಂಬ ಮೊದಲಿನಿಂದಲೂ ಪರಿಚಯದ ಕುಟುಂಬವಾಗಿದ್ದರೂ ಸಹ ಉಭಯ ದಾವೆಗಳ ವಿಚಾರ ನನಗೆ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಇಷ್ಟು ದಿನದ ಒಡನಾಟದ ಸಮಯದಲ್ಲಿ 1ನೇ ಪ್ರತಿವಾದಿಯು ಒ ಎಸ್ 60/2020ರ ದಾವೆ ಏನಾಯಿತು ಎಂಬ ವಿಚಾರ ನನಗೆ ತಿಳಿಸಿಲ್ಲ. ಈ ದಾವೆಯ 5ಮತ್ತು 6ನೇ ಐಟಂ ಆಸ್ತಿಯ ಒಟ್ಟು ವಿಸ್ತೀರ್ಣ ಎಷ್ಟು ಇದೆ ಎಂದು ನನಗೆ ಗೊತ್ತಿಲ್ಲ. 5ಮತ್ತು 6ನೇ ಐಟಂ ಆಸ್ತಿಯು ಸಂಪೂರ್ಣವಾಗಿ ನಮ್ಮ ಸ್ವಾಧೀನದಲ್ಲಿದಿಯೇ ಅಥವಾ ಸ್ವಲ್ಪ ಆಸ್ತಿ ನಮ್ಮ ಸ್ವಾದೀನದಲ್ಲಿದೆಯೋ ಎಂದು ನನಗೆ ಗೊತ್ತಿಲ್ಲ.

ದಿನಾಂಕ 10.09.1994ರಂದು ನನ್ನ ತಾತನನ್ನು ಬಿಟ್ಟು ಅವರ ಉಳಿದ ಅಣ್ಣ ತಮ್ಮಂದಿರು ಬರೆದುಕೊಂಡ ಪಾಲುಪಟ್ಟಿ ವಿಚಾರ ನನಗೆ ಗೊತ್ತಿಲ್ಲ. ಆ ಪಾಲುಪಟ್ಟಿ ಪ್ರಕಾರ ಆ ದಿವಸಕ್ಕೆ ಇದ್ದ ಒಟ್ಟು ಕುಟುಂಬದ ಆಸ್ತಿಯನ್ನು ನನ್ನ ತಾತನ ಸಹೋದರರು ನನ್ನ ತಾತನನ್ನು ಬಿಟ್ಟು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಅದು ಗೊತ್ತಿಲ್ಲ. ದಾವಾ 3 ಮತ್ತು 4ನೇ ಆಸ್ತಿಯು ನನ್ನ ತಾತನ ಅಣ್ಣ ತಮ್ಮಂದಿರಿಗೆ 1994ರ ಆರ್ ಟಿ ಸಿ ಯಲ್ಲಿ ನನ್ನ ತಾತನನ್ನು ಬಿಟ್ಟು ಅವರ ಅಣ್ಣ ತಮ್ಮಂದಿರಿಗೆ ಖಾತೆ ಆಗಿದೆ ಎಂದರೆ ಗೊತ್ತಿಲ್ಲ. ಆ ರೀತಿ ಆಗಿರುವ 13/1989-90ರ ಖಾತೆಯನ್ನು ಈವರೆಗೂ ಪ್ರಶ್ನಿಸಿದ್ದೀರಾ ಎಂಬ ಪ್ರಶ್ನೆಗೆ ನಮಗೆ ಗೊತ್ತೇ ಇರಲಿಲ್ಲ ಎನ್ನುತ್ತಾರೆ. ದಾವಾ 5ನೇ ಆಸ್ತಿಗೆ ಸಂಬಂಧಿಸಿದಂತೆ ನನ್ನ ತಾತನ ಅಣ್ಣ ತಮ್ಮಂದಿರಾದ ಗೂಳಪ್ಪ ನಂಜಪ್ಪ ಪುಟ್ಟಮಾದಪ್ಪ ರವರ ನಡುವೆ ಎಂ ಆರ್ 29/1986-87ರಂತೆ ವಿಭಾಗ ಪಡೆದುಕೊಂಡು ಅವರುಗಳ ಹೆಸರಿಗೆ ತಲಾ 34 ½ ಗುಂಟೆ ಜಮೀನು ನಮೂದು ಆಗಿದೆ ಎಂದರೆ ಗೊತ್ತಿಲ್ಲ.

ದಾವಾ ಆಸ್ತಿಗಳು ನನ್ನ ತಾತನ ತಂದೆಗೆ ಸೇರಿದ ಆಸ್ತಿಗಳು ಎನ್ನುವುದನ್ನು ತೋರಿಸಲು ನ್ಯಾಯಾಲಯಕ್ಕೆ ಏನು ದಾಖಲೆ ಕೊಟ್ಟಿದ್ದೀರಾ ಎಂದರೆ ತಿಳಿದುಕೊಂಡು ಹೇಳಬೇಕು ಎನ್ನುತ್ತಾರೆ. ನಿಪಿ 10ರಲ್ಲಿ ಕಂಡುಬರುವ ನಂಜಮ್ಮಣಿ ಮತ್ತು ಅವರ ಮಗ ಮಹೇಶ ಸಿ ಯಾರು ಎಂದು ನನಗೆ ಗೊತ್ತಿಲ್ಲ. ಅವರನ್ನು ಈ ದಾವೆಯಲ್ಲಿ ಸೇರಿಸಿಲ್ಲ. ಅವರೂ ಸಹ ಅವಶ್ಯಕ ಪಕ್ಷಗಾರರಾದ ಕಾರಣ ಅವರನ್ನು ದಾವೆಯಲ್ಲಿ ಸೇರ್ಪಡೆ ಮಾಡದೇ ನನ್ನ ದಾವೆ ಊರ್ಜಿತವಾಗುವುದಿಲ್ಲ ಎಂದರೆ ಮುಂದಕ್ಕೆ ಪಕ್ಷಗಾರರನ್ನಾಗಿ ಮಾಡುತ್ತೇನೆ ಎನ್ನುತ್ತಾರೆ.

ಪ್ರತಿವಾದಿಗಳ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯ ಕೇಳಿದರು. ಸಮಯ ನೀಡಲಾಯಿತು.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.
ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ನಂಜನಗೂಡು.